ಅನುಬಂಧ – 1

ಕರ್ನಾಟಕ ವಿಧಾನ ಸಭೆ

ಹದಿಮೂರನೇ ವಿಧಾನಸಭೆ

ಎರಡನೇ ಅಧಿವೇಶನ

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2009

(2009 ರ ವಿಧಾನಸಭೆಯ ವಿಧೇಯಕ ಸಂಖ್ಯೆ 1)

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ನ್ನು (1985 ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ** :- (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

2. **16ನೇ ಪ್ರಕರಣದ ತಿದ್ದುಪಡಿ** :- ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, 1985 ರ (1985 ರ ಕರ್ನಾಟಕ ಅಧಿನಿಯಮ 39) 16 ನೇ ಪ್ರಕರಣದಲ್ಲಿ, (3) ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

(3) ಪ್ರಾಧಿಕಾರವು ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ನಿಯಮಿಸಿದ ನಮೂನೆಯಲ್ಲಿ ಪ್ರಕಟಿಸತಕ್ಕದ್ದು. ಪ್ರಾಧಿಕಾರವು ಅಂಥ ಪರಿಶೋಧಿತ ಲೆಕ್ಕಪತ್ರಗಳ ಪ್ರತಿಗಳನ್ನು ಮತ್ತು ಲೆಕ್ಕಪರಿಶೋಧಕರ ವರದಿಯ ಪ್ರತಿಯನ್ನು

ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಪರಿಶೋಧಿತ ಲೆಕ್ಕಪತ್ರಗಳನ್ನು ಹಾಗೂ ಲೆಕ್ಕ ಪರಿಶೋಧಕರ ವರದಿಯನ್ನು ಸ್ವೀಕರಿಸಿದ ಮೇಲೆ ಆದಷ್ಟು ಬೇಗನೆ ಅವನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ವಿಧಾನ ಸಭೆಯ ಮುಂದಿಡಬೇಕಾದ ಕಾಗದ ಪತ್ರಗಳ ಸಮಿತಿಯ ಶಿಫಾರಸ್ಸಿನ ಮೇರೆಗೆ ಪ್ರಾಧಿಕಾರದ ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕೆ ಉಪಬಂಧ ಕಲ್ಪಿಸಲು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರಕ್ಕೆ ಸಂಬಂಧಿಸಿದ ಜ್ಞಾಪನ ಪತ್ರ

ಖಂಡ 2 : ಪರಿಶೋಧಿತ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಪ್ರಕಟಿಸಬೇಕಾದ ರೀತಿಯ ಬಗ್ಗೆ ನಿಯಮಗಳನ್ನು ರಚಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985 ರ (1985 ರ ಕರ್ನಾಟಕ ಅಧಿನಿಯಮ 39) ಉದ್ಧೃತ ಭಾಗ

XX XX XX

16. ಲೆಕ್ಕ ಮತ್ತು ಲೆಕ್ಕ ಪರಿಶೋಧನೆ :- (1) XX XX XX

(3) ಪ್ರಾಧಿಕಾರದ ಲೆಕ್ಕಗಳ ಲೆಕ್ಕಪರಿಶೋಧನೆಯಾದ ಕೂಡಲೇ, ಪ್ರಾಧಿಕಾರವು, ಅದರ ಒಂದು ಪ್ರತಿಯನ್ನು ಅದರ ಮೇಲಣ ಲೆಕ್ಕಪರಿಶೋಧಕರ ವರದಿಯ ಒಂದು ಪ್ರತಿಯೊಂದಿಗೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಲೆಕ್ಕಗಳನ್ನು ನಿಯಮಿಸಲಾದ ರೀತಿಯಲ್ಲಿ ಪ್ರಕಟಿಸುವಂತೆ ಮಾಡತಕ್ಕದ್ದು ಮತ್ತು ಅದರ ಪ್ರತಿಗಳನ್ನು ಯೋಗ್ಯ ಬೆಲೆಯಲ್ಲಿ ಮಾರಾಟಕ್ಕಾಗಿ ಇಡತಕ್ಕದ್ದು.

ಅನುಬಂಧ - 2

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ವಿಧೇಯಕ, 2009 (2009 ರ ವಿಧಾನದಭೆಯ ವಿಧೇಯಕ ಸಂಖ್ಯೆ 02)

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 ನ್ನು (1990 ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ :-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **3ನೇ ಪ್ರಕರಣದ ತಿದ್ದುಪಡಿ :-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3 ನೇ ಪ್ರಕರಣದ (2) ನೇ ಉಪ ಪ್ರಕರಣದಲ್ಲಿ, ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

ಮತ್ತು ಪರಂತು, (ಎ) ಖಂಡದಲ್ಲಿರುವುದಾವುದು ಹುದ್ದೆಗಳ ಸಂಖ್ಯೆ ಮತ್ತು ಸ್ವರೂಪವನ್ನು ನಿರ್ದಿಷ್ಟಪಡಿಸುವ ನಿಯಮಗಳಿಗೆ ಅನ್ವಯಿಸತಕ್ಕದ್ದಲ್ಲ.

3. **5 ನೇ ಪ್ರಕರಣದ ತಿದ್ದುಪಡಿ :-** ಮೂಲ ಅಧಿನಿಯಮದ 5 ನೇ ಪ್ರಕರಣದ (3) ನೇ ಉಪ ಪ್ರಕರಣದ ವಿವರಣೆಯಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1947 (1947 ರ ಕೇಂದ್ರ ಅಧಿನಿಯಮ 2) 5 ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ (1988 ರ ಕೇಂದ್ರ ಅಧಿನಿಯಮ 49) 13 ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸೃಜಿಸಿದ ಹುದ್ದೆಗಳ ಸಂಖ್ಯೆ ಮತ್ತು ಸ್ವರೂಪವನ್ನು ಮಾತ್ರ ನಿರ್ದಿಷ್ಟಪಡಿಸಿ ನಿಯಮಗಳ ಪೂರ್ವ ಪ್ರಕಟಣೆ ಮಾಡಬೇಕಾದ ಅಗತ್ಯತೆಯನ್ನು ಬಿಟ್ಟುಬಿಡಲು ಹಾಗೂ 5 ನೇ ಪ್ರಕರಣದ (3) ನೇ ಉಪ ಪ್ರಕರಣದ ಅಡಿಯಲ್ಲಿ ವಿವರಣೆಯಲ್ಲಿರುವ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1947 ನ್ನು ಕುರಿತ ಉಲ್ಲೇಖಕ್ಕೆ ಬದಲಾಗಿ ಹಳೆಯ ಅಧಿನಿಯಮವನ್ನು ನಿರಸನಗೊಳಿಸಿದ ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988 ರ (1988 ರ ಕೇಂದ್ರ ಅಧಿನಿಯಮ 49) ಉಲ್ಲೇಖವನ್ನು ಹಾಕಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮವು ಯಾವುದೇ ಹೆಚ್ಚಿನ ಆರ್ಥಿಕ ಹೊರೆಯನ್ನು ಒಳಗೊಂಡಿರುವುದಿಲ್ಲ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಎಸ್.ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 ರ (1990 ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

XX XX XX XX XX

5. **ಶಿಸ್ತು ವ್ಯವಹರಣೆಗಳಿಗೆ ಸಂಬಂಧಿಸಿದ ಉಪಬಂಧಗಳು :-** XX XX

(3) ಸಾರ್ವಜನಿಕ ಸೇವೆಗಳಲ್ಲಿರುವ ಸದಸ್ಯರ ವಿರುದ್ಧದ ಇರುವ ದುರ್ನಡತೆ ಅಥವಾ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಯಾವುದೇ ಶಿಸ್ತು ವ್ಯವಹರಣೆಗಳಲ್ಲಿ ಅಂಥ ಸದಸ್ಯ ಅಥವಾ ಯಾವೊಬ್ಬ ವ್ಯಕ್ತಿಯು ತನ್ನ ಆದಾಯಕ್ಕೆ ಮೀರಿದ ಸ್ವತ್ತನ್ನು ತನ್ನ ಪರವಾಗಿ ಹೊಂದಿದ್ದಾನೆಂದು ಅಥವಾ ಅಂಥ ಸದಸ್ಯನು ಕಛೇರಿಯ ಪದಾವಧಿಯ ಯಾವುದೇ ಸಮಯದಲ್ಲಿ ಹೊಂದಿದ್ದಾನೆಂದು ಮತ್ತು ಇದಕ್ಕೆ ಸರಿಯಾದ ಲೆಕ್ಕವನ್ನು ತೋರಿಸಲು ಸಾಧ್ಯವಿಲ್ಲವೆಂದು ಅಥವಾ ಆರ್ಥಿಕ ಸಂಪನ್ಮೂಲಗಳನ್ನು ಹೊಂದಿದ್ದಾನೆಂದು ರುಜುವಾತಾದಲ್ಲಿ, ಶಿಸ್ತು ಪ್ರಾಧಿಕಾರವು ಮತ್ತು ವಿಚಾರಣಾ ಪ್ರಾಧಿಕಾರವು, ಯಾವುದಾದರೂ ಇದ್ದಲ್ಲಿ, ಇದಕ್ಕೆ ವಿರುದ್ಧವಾಗಿ ರುಜುವಾತು ಪಡಿಸದ ಹೊರತು ಅಂಥ ನೌಕರನು ಅಂಥ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ ಭ್ರಷ್ಟಾಚಾರ ಎಂಬ ಪದಾವಳಿಯು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1947 ರ (1947 ರ ಕೇಂದ್ರ ಅಧಿನಿಯಮ

2) 5 ನೇ ಪ್ರಕರಣದ (1) ನೇ ಉಪ ಪ್ರಕರಣದಲ್ಲಿ ಕಛೇರಿ ಕರ್ತವ್ಯಗಳನ್ನು ನಿರ್ವಹಿಸುವಾಗ ಕ್ರಿಮಿನಲ್ ದುರ್ನಡತೆ ಅಥವಾ ಭಾರತೀಯ ದಂಡ ಪ್ರಕ್ರಿಯೆಯ 161 ಮತ್ತು 165 ನೇ ಪ್ರಕರಣಗಳಲ್ಲಿ ತನ್ನ ಅಧಿಕೃತ ಕರ್ತವ್ಯಗಳ ಸಂಬಂಧದಲ್ಲಿ ಪಡೆಯಬಹುದಾದ ಕಾನೂನು ಸಮ್ಮತ ಸಂಭಾವನೆಯನ್ನು ಹೊರತುಪಡಿಸಿ ಲಂಚವನ್ನು ತೆಗೆದುಕೊಳ್ಳುವುದು ಮತ್ತು ಪ್ರತಿಫಲಾಪೇಕ್ಷೆ ಇಲ್ಲದೆ ಮೌಲಿಕ ವಸ್ತುಗಳನ್ನು ಪಡೆಯುವುದು ಎಂಬ ಪದಾವಳಿಗೆ ಗೊತ್ತುಪಡಿಸಿದ ಅರ್ಥವನ್ನು ಹೊಂದಿರತಕ್ಕದ್ದು.

ಅನುಬಂಧ - 3

ಕರ್ನಾಟಕ ಬಾಡಿಗೆ (ತಿದ್ದುಪಡಿ) ವಿಧೇಯಕ, 2008

(2008 ರ ವಿಧಾನಸಭೆಯ ವಿಧೇಯಕ ಸಂಖ್ಯೆ 8)

ಕರ್ನಾಟಕ ಬಾಡಿಗೆ ಅಧಿನಿಯಮ, 1999 ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಬಾಡಿಗೆ ಅಧಿನಿಯಮ, 1999 ನ್ನು (2001 ರ ಕರ್ನಾಟಕ ಅಧಿನಿಯಮ ಸಂಖ್ಯೆ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೆ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :-** (1) ಈ ಅಧಿನಿಯಮವನ್ನು ಕರ್ನಾಟಕ ಬಾಡಿಗೆ (ತಿದ್ದುಪಡಿ) ಅಧಿನಿಯಮ, 2008 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **3ನೇ ಪ್ರಕರಣದ ತಿದ್ದುಪಡಿ :-** ಕರ್ನಾಟಕ ಬಾಡಿಗೆ ಅಧಿನಿಯಮ, 1999 ರಲ್ಲಿ (2001 ರ ಕರ್ನಾಟಕ ಅಧಿನಿಯಮ34), 3 ನೇ ಪ್ರಕರಣದ (ಎನ್) ಖಂಡದಲ್ಲಿ (ii) ನೇ ಬಾಬಿನ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

(iii) ತನ್ನ ಗಂಡನು ಸಂಸಾಯು ಹೂಡಿದ್ದ ಮೆನಯಲ್ಲಿ ಅಥವಾ ಬಾಡಿಗೆದಾರನಾಗಿದ್ದ ಆವರಣದಲ್ಲಿ ವಾಸವಾಗಿದ್ದ ಅಥವಾ ವಾಸವಾಗಿರಲು ಹಕ್ಕುಳ್ಳ ಬಾಡಿಗೆದಾರನ ಪರಿತ್ಯಕ್ತ ಪತ್ನಿ; ಮತ್ತು

(iv) ವಿಚ್ಛೇದನದ ಡಿಕ್ರಿಯಲ್ಲಿ ಸಂಸಾರ ಹೂಡಿದ್ದ ಮನೆಯಲ್ಲಿ ಅಥವಾ ಬಾಡಿಗೆ ಇದ್ದ ಆವರಣದಲ್ಲಿ ವಾಸ ಮಾಡುವುದಕ್ಕೆ ಆಕೆಗೆ ಹಕ್ಕಿದೆ ಎನ್ನುವುದು ಒಂದು ಷರತ್ತಾಗಿ ಇರುವಂಥ ಒಂದು ವಿಚ್ಛೇದನದ ಡಿಕ್ರಿಯನ್ನು ಹೊಂದಿರುವ ಬಾಡಿಗೆದಾರನ ವಿಚ್ಛೇದಿತ ಪತ್ನಿ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಬಿಎಲ್‌ಆರ್ 2005 ಕರ್ನಾಟಕ 1721 ರಲ್ಲಿ ವರದಿಯಾದ ಬಿ.ಪಿ. ಅಚಲಾ ಆನಂದ್-ವಿರುದ್ಧ- ಎಸ್. ಅಪ್ಪಿ ರೆಡ್ಡಿ ಮತ್ತು ಇನ್ನೊಬ್ಬರು, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು, ತನ್ನ ಗಂಡನು ಸಂಸಾರ ಹೂಡಿದ ಮನೆ ಅಥವಾ ಬಾಡಿಗೆದಾರನಾಗಿದ್ದ ಆವರಣದಲ್ಲಿ ವಾಸವಾಗಿದ್ದ ಅಥವಾ ವಾಸವಾಗಿರಲು ಹಕ್ಕುಳ್ಳ ಬಾಡಿಗೆದಾರನ ಪರಿತ್ಯಕ್ತ ಪತ್ನಿಗೆ ಮತ್ತು ಸಂಸಾರ ಹೂಡಿದ್ದ ಮನೆ ಅಥವಾ ಬಾಡಿಗೆ ಇದ್ದ ಆವರಣದಲ್ಲಿ ವಾಸ ಮಾಡಲು ಆಕೆಗೆ ಹಕ್ಕಿರತಕ್ಕದ್ದು ಎಂಬುದನ್ನು ಒಂದು ಷರತ್ತಾಗಿ ಸೇರಿಸಿರುವಂತಹ ಒಂದು ವಿಚ್ಛೇದನದ ಡಿಕ್ರಿಯನ್ನು ಹೊಂದಿರುವ ಬಾಡಿಗೆದಾರನ ವಿಚ್ಛೇದಿತ ಪತ್ನಿಗೆ ಬಾಡಿಗೆದಾರಿಗೆ ಹಕ್ಕನ್ನು ಕಲ್ಪಿಸುವುದಕ್ಕಾಗಿ ಕನಾಟಕ ಬಾಡಿಗೆ ಅಧಿನಿಯಮ, 1999 ನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವ ವೆಚ್ಚವೂ ಉಂಟಾಗುವುದಿಲ್ಲ.

ಜಿ. ಕರುಣಾಕರ ರೆಡ್ಡಿ
ಕಂದಾಯ ಸಚಿವರು

ಎಸ್. ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ

ಕರ್ನಾಟಕ ಬಾಡಿಗೆ ಅಧಿನಿಯಮ, 1999 ನ್ನು (2001 ರ ಕರ್ನಾಟಕ ಅಧಿನಿಯಮ 34 ಉದ್ಧೃತ ಭಾಗ)

XX XX XX

3. **ಪರಿಭಾಷೆಗಳು** :- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.

(ಎ) XX XX XX

(ಎನ್) "ಬಾಡಿಗೆದಾರ" ಎಂದರೆ ಯಾವ ವ್ಯಕ್ತಿಯಿಂದ ಅಥವಾ ಯಾರಿಗಾಗಿ ಅಥವಾ ಯಾರ ಪರವಾಗಿ ಯಾವುದೇ ಆವರಣದ ಬಾಡಿಗೆಯನ್ನು ಸಂದಾಯ ಮಾಡಬೇಕಾಗಿದೆಯೋ ಅಥವಾ ಯಾವುದೇ ವಿಶೇಷ ಕರಾರು ಇರದಿದ್ದ ಸಂದರ್ಭದಲ್ಲಿ ಅದನ್ನು ಸಂದಾಯ ಮಾಡಬೇಕಾಗುತ್ತಿತ್ತೋ ಆ ವ್ಯಕ್ತಿ : ಮತ್ತು ಇದು :-

(i) ಒಳ ಬಾಡಿಗೆದಾರ;

(ii) ಬಾಡಿಗೆದಾರಿಕೆಯು ಮುಕ್ತಾಯವಾದ ತರುವಾಯ ಸ್ವಾಧೀನತೆಯಲ್ಲಿ ಮುಂದುವರಿಯುವ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುತ್ತದೆ. ಆದರೆ ಇದು 1882 ರ ಭಾರತೀಯ ಅನುಬೋಧ ಹಕ್ಕುಗಳ ಅಧಿನಿಯಮದ (1882 ರ ಕೇಂದ್ರ ಅಧಿನಿಯಮ 5) 52 ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಲೈಸೆನ್ಸ್ ನೀಡಲಾಗಿರುವ ಯಾವೊಬ್ಬ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

XX XX XX

ಅನುಬಂಧ - 4

ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ವಿಧೇಯಕ, 2009.

(2009 ರ ವಿಧಾನಸಭೆಯ ವಿಧೇಯಕ ಸಂಖ್ಯೆ 4)

ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982 ನ್ನು

(1984 ರ ಕರ್ನಾಟಕ ಅಧಿನಿಯಮ ಸಂಖ್ಯೆ 1) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೆ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :-** (1) ಈ ಅಧಿನಿಯಮವನ್ನು ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. **3ಎ, 3ಬಿ, 3ಸಿ, 3ಡಿ ಮತ್ತು 3ಇ ಹೊಸ ಪ್ರಕರಣಗಳ ಸೇರ್ಪಡೆ :-** ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982 (1984 ರ ಕರ್ನಾಟಕ ಅಧಿನಿಯಮ ಸಂಖ್ಯೆ 1) 3 ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

3ಎ. ಸಮರ್ಪಣಾ ನಿಷೇಧಕ ನಿರ್ಬಂಧಕಾಜ್ಞೆಯನ್ನು ಹೊರಡಿಸಲು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನಿಗೆ ಇರುವ ಅಧಿಕಾರ :- (1) ಈ ಅಧಿನಿಯಮದಲ್ಲಿ ಅದಕ್ಕೆ ವಿರುದ್ಧವಾಗಿ ಏನೇ ಇದ್ದರೂ ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯ ಅರ್ಜಿಯ ಮೂಲಕ ಅಥವಾ ಯಾವುದೇ ವ್ಯಕ್ತಿಯ ದೂರಿನ ಮೂಲಕ ಅಥವಾ ಅನ್ಯಥಾ ಮಾಹಿತಿಯನ್ನು ಪಡೆದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು, ಅಧಿನಿಯಮವನ್ನು ಉಲ್ಲಂಘಿಸಿ ಸಮರ್ಪಣೆಯನ್ನು ವ್ಯವಸ್ಥೆ ಮಾಡಲಾಗಿದೆ ಅಥವಾ ಅದನ್ನು ಇನ್ನೇನು ವಿದ್ಯುಕ್ತಗೊಳಿಸಲಿದ್ದಾರೆ ಎಂದು ಮನಗಂಡರೆ ಅಂಥ ಮ್ಯಾಜಿಸ್ಟ್ರೇಟನು ಒಂದು ಸಂಸ್ಥೆಯ ಅಥವಾ ವ್ಯಕ್ತಿಗಳ ಸಂಘದ ಒಬ್ಬ ಸದಸ್ಯನೂ ಸೇರಿದಂತೆ ಯಾವನೇ ವ್ಯಕ್ತಿಯ ವಿರುದ್ಧ ಅಂಥ ಸಮರ್ಪಣೆಯನ್ನು ನಿಷೇಧಿಸಿ ಅಥವಾ ನಿಗ್ರಹಿಸಿ ಒಂದು ನಿಷೇಧಕ ನಿರ್ಬಂಧಕಾಜ್ಞೆಯನ್ನು ಹೊರಡಿಸತಕ್ಕದ್ದು.

(2) ಅಂಥ ಸಮರ್ಪಣೆಯು ನಡೆಯಬಹುದಾದ ಸಂಭಾವ್ಯತೆಯ ಬಗ್ಗೆ ವೈಯಕ್ತಿಕ ತಿಳುವಳಿಕೆಯನ್ನು ಹೊಂದಿರುವ ಅಥವಾ ನಂಬಲು ಕಾರಣಗಳಿರುವ ಯಾವೊಬ್ಬ ವ್ಯಕ್ತಿಯೂ ಮತ್ತು ಸಾಕಷ್ಟು ಮಾಹಿತಿಯನ್ನು ಹೊಂದಿರುವ ಒಂದು

ಸರ್ಕಾರೇತರ ಸಂಸ್ಥೆಯು (1) ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಅಥವಾ ಒಂದು ದೂರನ್ನು ನೀಡಬಹುದು.

(3) ಸಂದರ್ಭಾನುಸಾರ ಯಾವುದೇ ನಂಬಲರ್ಹವಾದ ವರದಿ ಅಥವಾ ಮಾಹಿತಿ ಅಥವಾ ದೂರಿನ ಆಧಾರದ ಮೇಲೆ ಸಹ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಸ್ವಪ್ರೇರಣೆಯಿಂದ ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು.

(4) ಜಾತ್ರೆಗಳಲ್ಲಿ ಹುಣ್ಣಿಮೆಯಂಥ ಕೆಲವು ದಿನಗಳಲ್ಲಿ ಮಹಿಳೆಯರನ್ನು ದೇವದಾಸಿಯರಾಗಿ ಸಾಮೂಹಿಕವಾಗಿ ಸಮರ್ಪಣೆ ಮಾಡುವುದನ್ನು ತಡೆಗಟ್ಟುವ ಉದ್ದೇಶಕ್ಕಾಗಿ, ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ, ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಗೆ ಪ್ರದಾನ ಮಾಡಲಾದ ಎಲ್ಲಾ ಅಧಿಕಾರಗಳನ್ನುಳ್ಳ, ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯೆಂದು ಭಾವಿಸತಕ್ಕದ್ದು.

(5) ಜಿಲ್ಲಾ ಮ್ಯಾಜಿಸ್ಟ್ರೇಟನು, ಸಮರ್ಪಣೆಯನ್ನು ನಿಲ್ಲಿಸುವುದಕ್ಕೆ ಅಥವಾ ತಪ್ಪಿಸುವುದಕ್ಕೆ ಹೆಚ್ಚಿನ ಅಧಿಕಾರವನ್ನು ಸಹ ಹೊಂದಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಆತನು ಅಗತ್ಯವಾಗಬಹುದಾದ ಕನಿಷ್ಟ ಬಲಪ್ರಯೋಗವನ್ನು ಮಾಡುವುದೂ ಒಳಗೊಂಡಂತೆ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು.

(6) (1) ನೇ ಉಪಪ್ರಕರಣದಡಿಯಲ್ಲಿ ಯಾವುದೇ ವ್ಯಕ್ತಿಯ ಅಥವಾ ಯಾವುದೇ ಸಂಸ್ಥೆಯ ಅಥವಾ ವ್ಯಕ್ತಿಗಳ ಸಂಘದ ಸದಸ್ಯನ ವಿರುದ್ಧ ಯಾವುದೇ ನಿಷೇಧಕ ನಿರ್ಬಂಧಕಾಜ್ಞೆಯನ್ನು ಸಂಬಂಧಪಟ್ಟ ಮ್ಯಾಜಿಸ್ಟ್ರೇಟನು ಅಂಥ ವ್ಯಕ್ತಿ, ಸಂಸ್ಥೆಯ ಅಥವಾ ಸಂಘದ ಸದಸ್ಯರುಗಳಿಗೆ ಮುಂಚಿತವಾಗಿ ನೋಟೀಸ್‌ನ್ನು ನೀಡಿದ್ದ ಹೊರತು ಮತ್ತು ನಿರ್ಬಂಧಕಾಜ್ಞೆಯನ್ನು ಏಕೆ ಹೊರಡಿಸಬಾರದು ಎಂಬ ಬಗ್ಗೆ ಕಾರಣ ತೋರಿಸುವ ಅವಕಾಶವನ್ನು ಆತನಿಗೆ ಅಥವಾ ಅವರಿಗೆ ನೀಡಿದ್ದ ಹೊರತು ಹೊರಡಿಸತಕ್ಕದ್ದಲ್ಲ.

ಪರಂತು, ಯವುದೇ ತುರ್ತು ಸಂದರ್ಭದಲ್ಲಿ, ಸಂಬಂಧಪಟ್ಟ ಮ್ಯಾಜಿಸ್ಟ್ರೇಟನು ಈ ಉಪ ಪ್ರಕರಣದಡಿ ಯಾವುದೇ ನೋಟೀಸನ್ನು ನೀಡದೆ ಒಂದು ಮಧ್ಯಂತರ ನಿರ್ಬಂಧಕಾಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(7) ಯಾವ ಪಕ್ಷಕಾರನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆಯೋ ಆತನಿಗೆ ನೋಟೀಸನ್ನು ನೀಡಿದ ತರುವಾಯ ಮತ್ತು ಆತನ ಹೇಳಿಕೆಯನ್ನು ಪಡೆದ ಮೇಲೆ (1) ನೇ ಉಪಪ್ರಕರಣದಡಿಯಲ್ಲಿ ಹೊರಡಿಸಿದ ನಿರ್ಬಂಧಕಾಜ್ಞೆಯನ್ನು ಸ್ಥಿರೀಕರಿಸಬಹುದು ಅಥವಾ ತೆರವುಗೊಳಿಸಬಹುದು.

(8) ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ತಾನಾಗಿಯೇ ಆಗಲಿ ಅಥವಾ ಯಾವುದೇ ಬಾಧಿತ ವ್ಯಕ್ತಿಯ ಅರ್ಜಿಯ ಮೇಲಾಗಲಿ (1) ನೇ ಉಪ ಪ್ರಕರಣದಡಿಯಲ್ಲಿ ಹೊರಡಿಸಲಾದ ನಿರ್ಬಂಧಕಾಜ್ಞೆಯನ್ನು ರದ್ದುಗೊಳಿಸಬಹುದು ಅಥವಾ ಮಾರ್ಪಡಿಸಬಹುದು.

(9) (1) ನೇ ಉಪಪ್ರಕರಣದಡಿಯಲ್ಲಿ ಒಂದು ಅರ್ಜಿಯು ಸ್ವೀಕರಿಸಿದ ಮೇಲೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಅರ್ಜಿದಾರನಿಗೆ ಖುದ್ದಾಗಿ ಅಥವಾ ತನ್ನ ನ್ಯಾಯವಾದಿಯ ಮೂಲಕ ತನ್ನ ಮುಂದೆ ಹಾಜರಾಗಲು ಅವಕಾಶವನ್ನು ನೀಡತಕ್ಕದ್ದು. ಅರ್ಜಿದಾರನ ಅಹವಾಲನ್ನು ಕೇಳಿದ ತರುವಾಯ, ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನು ಅರ್ಜಿಯನ್ನು ಪೂರ್ಣವಾಗಿ ಅಥವಾ ಭಾಗಶಃ ತಿರಸ್ಕರಿಸಬಹುದು ಮತ್ತು ಹಾಗೆ ಮಾಡಿದ್ದಕ್ಕೆ ತನ್ನ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(10) (1) ನೇ ಉಪಪ್ರಕರಣದಡಿಯಲ್ಲಿ ತನ್ನ ವಿರುದ್ಧ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆ ಎಂದು ಗೊತ್ತಿರುವ ಯಾವೊಬ್ಬ ವ್ಯಕ್ತಿಯು, ಅಂಥ ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿದರೆ, ಆತನು ಮೂರು ವರ್ಷಗಳ ಅವಧಿಯ ವರೆಗೆ ವಿಸ್ತರಿಸಬಹುದಾದ ಆದರೆ ಎರಡು ವರ್ಷಗಳಿಗಿಂತ ಕಡಿಮೆಯಲ್ಲದ ಅವಧಿಯವರೆಗೆ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

3ಬಿ. ಮಹಿಳೆಯ ಕಾಪಾಡುವಿಕೆ, ಆರೈಕೆ, ಸಂರಕ್ಷಣೆ, ಕ್ಷೇಮಾಭಿವೃದ್ಧಿ ಮತ್ತು ಪುನರ್ವಸತಿ :- ರಾಜ್ಯ ಸರ್ಕಾರವು, ದೇವದಾಸಿ ಪುನರ್ವಸತಿ ಯೋಜನೆಯ ಅಡಿಯಲ್ಲಿ ಸಲಹೆ ನೀಡುವುದು ಮತ್ತು ಜಾಗೃತಿ ಮೂಡಿಸುವುದರ ಮೂಲಕ ಸಮರ್ಪಣೆಯಾಗುವುದರಿಂದ ಕಾಪಾಡಿದಂತಹ ಮಹಿಳೆಯ ಪುನರ್ವಸತಿಗೆ ಅವಶ್ಯಕವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅವಶ್ಯವಿದ್ದಲ್ಲಿ ರಿಮಾಂಡ್

ಹೋಮ್‌ನಲ್ಲಿ ಆರು ತಿಂಗಳವರೆಗೆ ರಕ್ಷಣೆಯನ್ನು ನೀಡುವ ಅಥವಾ ಆಶ್ರಯವನ್ನು ನೀಡುವ ಮೂಲಕ ಆದಾಯಗಳಿಕೆ ಚಟುವಟಿಕೆಗಳಲ್ಲಿ ಸದರಿ ಮಹಿಳೆಯನ್ನು ತೊಡಗಿಸಿ ಆಕೆಯನ್ನು ಆರ್ಥಿಕವಾಗಿ ಸಬಲಗೊಳಿಸತಕ್ಕದ್ದು ಹಾಗೂ ಸದರಿ ಮಹಿಳೆಯು ಬ್ಯಾಂಕ್‌ಗಳಿಂದ ಸಹಾಯಧನ ಮತ್ತು ಸಾಲಗಳನ್ನು ಪಡೆದು ಸ್ವಾವಲಂಬಿಯಾಗುವಂತೆ ನೋಡಿಕೊಳ್ಳತಕ್ಕದ್ದು.

3ಸಿ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಲ್ಲದ್ದು ಆಗಿರತಕ್ಕದ್ದು :- ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯ ಮತ್ತು ಜಾಮೀನೀಯವಲ್ಲದ್ದಾಗಿರತಕ್ಕದ್ದು.

3ಡಿ ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯ ನೇಮಕಾತಿ :- (1) ರಾಜ್ಯ ಸರ್ಕಾರವು, ರಾಜ್ಯ ಪತ್ರದಲ್ಲಿ ಅಧಿಸೂಚಿಸುವ ಮೂಲಕ ಇಡೀ ರಾಜ್ಯಕ್ಕೆ ಅಥವಾ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಕ್ಕೆ ಸದರಿ ನಿದಿಷ್ಟಪಡಿಸಿದ ಪ್ರದೇಶ ಅಥವಾ ಪ್ರದೇಶಗಳ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿ ಎಂಬ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಕ ಮಾಡತಕ್ಕದ್ದು

(2) (1) ನೇ ಉಪ ಪ್ರಕರಣಕ್ಕೆ ಪ್ರತಿಕೂಲವಾಗದಂತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಬಂಧಪಟ್ಟ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಅಥವಾ ಯೋಜನಾ ಅಧಿಕಾರಿಯು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಗಳಾಗಿರತಕ್ಕದ್ದು.

(3) ರಾಜ್ಯ ಸರ್ಕಾರವು, ಸಮಾಜಸೇವೆಯಲ್ಲಿ ಒಳ್ಳೆಯ ಹೆಸರನ್ನು ಪಡೆದಿರುವ ಸಂಬಂಧಿಸಿದ ಸ್ಥಳೀಯ ಗೌರವಾನ್ವಿತ ಸದಸ್ಯ ಅಥವಾ ಗ್ರಾಮ ಪಂಚಾಯಿತಿ ಅಥವಾ ಮುನ್ಸಿಪಾಲಿಟಿಯ ಒಬ್ಬ ಅಧಿಕಾರಿ ಅಥವಾ ಸರ್ಕಾರಿ ಅಥವಾ ಯಾವುದೇ ಸಾರ್ವಜನಿಕ ಉದ್ಯಮದ ಒಬ್ಬ ಅಧಿಕಾರಿ ಅಥವಾ ಯಾವುದೇ ಸರ್ಕಾರೇತರ ಸಂಸ್ಥೆಯ ಒಬ್ಬ ಪದಾಧಿಕಾರಿಯನ್ನು ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಗೆ ಸಹಾಯ ನೀಡುವಂತೆ ಕೋರಬಹುದು ಮತ್ತು ಸಂದರ್ಭಾನುಸಾರ ಅಂಥ ಸದಸ್ಯ, ಅಧಿಕಾರಿ ಅಥವಾ ಸಿಬ್ಬಂದಿಯು ಆ ರೀತಿ ವರ್ತಿಸಲು ಬದ್ಧನಾಗಿರತಕ್ಕದ್ದು.

(4) ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯ ಕರ್ತವ್ಯಗಳು ಈ ಮುಂದಿನಂತಿರತಕ್ಕದ್ದು, :-

(ಎ) 3ಎ ಪ್ರಕರಣದ (1) ನೇ ಉಪ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಕ್ರಮವನ್ನು ಕೈಗೊಂಡು ದೇವದಾಸಿ ಸಮರ್ಪಣೆಯನ್ನು ನಿಷೇಧಿಸುವುದು;

(ಬಿ) ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಪರಿಣಾಮಕಾರಿಯಾಗಿ ಅಭಿಯೋಜನೆ ಮಾಡುವುದಕ್ಕಾಗಿ ಸಾಕ್ಷ್ಯಗಳನ್ನು ಸಂಗ್ರಹಿಸುವುದು;

(ಸಿ) ದೇವದಾಸಿ ಸಮರ್ಪಣೆಗೆ ಪ್ರೋತ್ಸಾಹಿಸಬೇಡಿ, ಸಹಾಯ ನೀಡಬೇಡಿ, ನೆರವು ನೀಡಬೇಡಿ ಅಥವಾ ಅವಕಾಶ ಕೊಡಬೇಡಿ ಎಂದು ವೈಯಕ್ತಿಕ ಪ್ರಕರಣಗಳಲ್ಲಿ ಬುದ್ಧಿವಾದ ಹೇಳುವುದು ಅಥವಾ ಆ ಪ್ರದೇಶದ ನಿವಾಸಿಗಳಿಗೆ ಸಲಹೆಗಳನ್ನು ನೀಡುವುದು;

(ಡಿ) ಸಮರ್ಪಣೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಉಂಟುಮಾಡುವುದು;

(ಇ) ಸಮರ್ಪಣೆಯು ಎಷ್ಟು ಹೀನಾಯ ಎಂಬುದನ್ನು ಸಮುದಾಯಕ್ಕೆ ಮನಗಾಣಿಸುವುದು;

(ಎಫ್) ಘಟನೆ ನಡೆದ ಸ್ಥಳದಲ್ಲಿಯೇ ಪಂಚನಾಮೆ ವರದಿಯನ್ನು ಬರೆಯಲು ಮತ್ತು ಸಾಕ್ಷಿಗಳ ಸಹಿಯನ್ನು ಪಡೆಯಲು ಕ್ರಮ ಕೈಗೊಳ್ಳುವುದು;

(ಜಿ) ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ನಿಯತಕಾಲಿಕ ವರದಿಯನ್ನು ಮತ್ತು ಅಂಕಿ ಅಂಶಗಳನ್ನು ಸಲ್ಲಿಸುವುದು, ಮತ್ತು

(ಹೆಚ್) ರಾಜ್ಯ ಸರ್ಕಾರವು ತನಗೆ ವಹಿಸಬಹುದಾದಂಥ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು.

(5) ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚಿಸುವ ಮೂಲಕ ಸದರಿ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು

ಪರಿಮಿತಿಗಳಿಗೆ ಒಳಪಟ್ಟು ಪೊಲೀಸು ಅಧಿಕಾರಿಯ ಅಧಿಕಾರಗಳನ್ನು ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಚಲಾಯಿಸಲು ವಹಿಸಿಕೊಡಬಹುದು ಮತ್ತು ದೇವದಾಸಿ ಸಮರ್ಪಣೆ ನಿಷೇಧಕ ಅಧಿಕಾರಿಯು ಅದರಲ್ಲಿ ನಿರ್ದಿಷ್ಟಪಡಿಸಿದಂಥ ಷರತ್ತುಗಳಿಗೆ ಮತ್ತು ಪರಿಮಿತಿಗಳಿಗೆ ಒಳಪಟ್ಟು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(6) ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಕಾಪಾಡಲ್ಪಟ್ಟ ಮಹಿಳೆಯ ಪುನರ್ವಸತಿಗಾಗಿ 3ಬಿ ಪ್ರಕರಣದ ಅಡಿಯಲ್ಲಿ ನ್ಯಾಯಾಲಯದ ಆದೇಶವನ್ನು ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(7) ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ತನ್ನ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ಸಮರ್ಪಣೆಯ ಪ್ರಕರಣಗಳು ನಡೆದಾಗ ಅಥವಾ ನಡೆಯುವ ಸಂಭವವಿರುವಾಗ ಸದರಿ ವಿಷಯವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಹಾಗೂ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ವರದಿಮಾಡತಕ್ಕದ್ದು.

3ಇ ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಸಾರ್ವಜನಿಕ ನೌಕರನಾಗಿರುವುದು :- ದೇವದಾಸಿ ಸಮರ್ಪಣಾ ನಿಷೇಧಕ ಅಧಿಕಾರಿಯು ಭಾರತ ದಂಡ ಸಂಹಿತೆಯ (1860 ರ ಕೇಂದ್ರ ಅಧಿನಿಯಮ 45) 21 ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಸಾರ್ವಜನಿಕ ನೌಕರನಾಗಿರುವನೆಂದು ಭಾವಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1) ಹೆಣ್ಣುಮಕ್ಕಳನ್ನು ದೇವದಾಸಿಯರಾಗಿ ಸಮರ್ಪಣೆ ಮಾಡಬಹುದಾದ ಸಂಭಾವ್ಯತೆಯನ್ನು ತಡೆಗಟ್ಟಲು ನಿರ್ಬಂಧಕಾಜ್ಞೆಯನ್ನು ಹೊರಡಿಸುವ ಅಧಿಕಾರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟನು ಅಥವಾ ಕಾರ್ಯಕಾರಿ ಮ್ಯಾಜಿಸ್ಟ್ರೇಟನಿಗೆ ನೀಡುವುದಕ್ಕಾಗಿ,

(2) ದೇವದಾಸಿಯರಾಗಿ ಸಮರ್ಪಣೆಯಿಂದ ಮಹಿಳೆಯನ್ನು ಕಾಪಾಡುವುದು, ಆರೈಕೆ, ಸಂರಕ್ಷಣೆ, ಕ್ಷೇಮಾಭಿವೃದ್ಧಿ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ,

L27

(3) ಈ ಅಧಿನಿಯಮದಡಿಯಲ್ಲಿನ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಲ್ಲದ್ದು ಎಂದು ಉಪಬಂಧಿಸುವುದಕ್ಕಾಗಿ;

(4) ದೇವದಾಸಿ ಸಮರ್ಪಣೆ ನಿಷೇಧ ಅಧಿಕಾರಿಯನ್ನು ಅಂಥ ಸಮರ್ಪಣೆಯನ್ನು ತಡೆಗಟ್ಟುವ ಅಧಿಕಾರಗಳೊಂದಿಗೆ ನೇಮಿಸಲು ಉಪಬಂಧ ಕಲ್ಪಿಸುವುದಕ್ಕಾಗಿ,

-ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಅಧಿನಿಯಮ, 1982 ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲ.

ಪಿ.ಎಂ. ನರೇಂದ್ರ ಸ್ವಾಮಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಸಚಿವರು

ಎಸ್. ಬಿ. ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ